ಸೃಜನಿ

SRUJANI: Indian Journal of Innovative Research and Development (SIJIRD)
Volume-2 Issue 2, May-June 2023, Pp. 145-149
Bi-Monthly, Peer-Reviewed, Open Access, Indexed Journal

I S S N: 2583-3510
SIRDF
JOURNALS
editor@srujani.in
www.srujani.in

# ಜನಕ ರಾಗವಾದ ಭೈರವ ಥಾಟಿನ ಕೆಲವು ಜನ್ಯ ರಾಗಗಳು

**ಡಾ. ಶರಣಬಸಪ್ಪ ಮೇಡೆದಾರ**

ಉಪನ್ಯಾಸಕರು, ಲಲಿತಕಲಾ ಹಾಗೂ ಸಂಗೀತ ಮಹಾವಿದ್ಯಾಲಯ, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ.

***Abstract:***

*ರಾಗಗಳನ್ನು ಪ್ರಾಚೀನ ಕಾಲದಿಂದಲೂ ಅನೇಕ ರೀತಿಯಿಂದ ವರ್ಗೀಕರಿಸುತ್ತಾ ಬರಲಾಗಿದೆ. ವರ್ಗೀಕರಣವು ಪ್ರಾಕೃತಿಕ ನಿಯಮವಾಗಿದೆ. ರಾಗದ ವರ್ಗೀಕರಣದಲ್ಲಿ ಪ್ರಾಚೀನ ಕಾಲ, ಮಧ್ಯಕಾಲ, ಆಧುನಿಕ ಕಾಲಗಳನ್ನು ಒಳಗೊಂಡಿದೆ. ಪ್ರಾಚೀನ ಕಾಲದಿಂದ ಇಂದಿನವರೆಗೂ ರಾಗ ವರ್ಗೀಕರಣ ನಿರಂತರ ಬದಲಾಗುತ್ತ ಸಾಗಿದೆ. ಹೇಗೆ ಕರ್ನಾಟಕ ಸಂಗೀತದಲ್ಲಿ ಎಲ್ಲ ರಾಗಗಳೂ 72 ಮೇಳಗಳಲ್ಲಿ ಅಡಕವಾಗಿದೆಯೋ ಹಾಗೆ ಹಿಂದೂಸ್ತಾನಿ ಸಂಗೀತದಲ್ಲಿ 10 ಥಾಟ್‌ಗಳಲ್ಲಿ ಅಡಕವಾಗಿವೆ. ಪ್ರಸ್ತುತ ಲೇಖನದಲ್ಲಿ ಜನಕ ರಾಗವಾದ ಭೈರವ ಥಾಟಿನ ಕೆಲವು ಜನ್ಯರಾಗಗಳನ್ನು ಕುರಿತು ವಿವರಿಸಲಾಗಿದೆ.*

***Keywords:*** *ರಾಗ ವರ್ಗೀಕರಣ, ಕರ್ನಾಟಕ ಸಂಗೀತ, ಹಿಂದೂಸ್ತಾನಿ ಸಂಗೀತ, ಜನಕ ರಾಗ, ಭೈರವ ಥಾಟ್.*

**ಪೀಠಿಕೆ**

ಪ್ರಾಚೀನ ಕಾಲದಿಂದಲೂ ರಾಗಗಳನ್ನು ಅನೇಕ ರೀತಿಯಿಂದ ವರ್ಗೀಕರಿಸುತ್ತಾ ಬರಲಾಗಿದೆ. ವರ್ಗೀಕರಣವು ಪ್ರಾಕೃತಿಕ ನಿಯಮವಾಗಿದೆ. ರಾಗದ ವರ್ಗೀಕರಣದಲ್ಲಿ ಪ್ರಾಚೀನ ಕಾಲ, ಮಧ್ಯಕಾಲ, ಆಧುನಿಕ ಕಾಲಗಳನ್ನು ಒಳಗೊಂಡಿದೆ. ಪ್ರಾಚೀನ ಕಾಲದಲ್ಲಿ ಜಾತಿ ವರ್ಗೀಕರಣ, ಗ್ರಾಮ ರಾಗ ವರ್ಗೀಕರಣ ದಶವಿಧಿ ರಾಗ ವರ್ಗೀಕರಣ, ಶುದ್ಧ ಛಾಯಾಂಗ, ಸಂಕೀರ್ಣ ವರ್ಗೀಕರಣ ಹಾಗೂ ಮಧ್ಯಕಾಲದಲ್ಲಿ ಶುದ್ಧ ಛಾಯಾಂಗ, ಸಂಕೀರ್ಣ ಮೇಲ, ರಾಗ ವರ್ಗೀಕರಣ ಹಾಗೂ ರಾಗ ರಾಗಿಣೀ ವರ್ಗೀಕರಣ ಎಂಬುದಾಗಿಯೂ, ರಾಗಗಳಲ್ಲಿ ಪುರುಷ ಮತ್ತು ಸ್ತ್ರೀ ಭೇದ ಕಲ್ಪಿಸಿ 'ವಂಶ ಪಾರಂಪರೆಯ' ಪದ್ಧತಿಯನ್ನು ಮಧ್ಯಕಾಲವು ಕಂಡುಕೊಂಡಿತು. "ರಾಗ ರಾಗಿಣಿಯ" ವಂಶ ಪರಂಪರೆ ತಳಹದಿಯ ಮೇಲೆಯೇ 'ರಾಗ ರಾಗಿಣಿ' ಪದ್ಧತಿ ಜನನವಾಯಿತು. ಇಲ್ಲಿಯೂ ಸೃಜನಶೀಲ ವಿಚಾರಗಳ ತಾಕಲಾಟದ ಪರಿಣಾಮವಾಗಿ ಶಿವ ಅಥವಾ ಸೋಮೇಶ್ವರ ಮತ, ಕೃಷ್ಣ ಅಥವಾ ಕಲ್ಲಿನಾಥ ಮತ, ಭರತ ಮತ ಹಾಗೂ ಹನುಮ ಎಂಬ ನಾಲ್ಕು ಮತಗಳು ಹುಟ್ಟಿಕೊಂಡವು. ಪ್ರಾಚೀನ, ಮಧ್ಯ ಮತ್ತು ಆಧುನಿಕ ಕಾಲದಲ್ಲಿ ರಾಗ ರಾಗಿಣಿಗಳ ಸ್ವರೂಪ ಮತ್ತು ಸ್ವರಗಳಲ್ಲಾಗಲಿ ಯಾವ ಬಗೆಯ ಸಮಾನತೆ ಕಂಡುಬರುವುದಿಲ್ಲ. ಆಧುನಿಕ ಕಾಲದಲ್ಲಿ ಶುದ್ಧ ಛಾಯಾಂಗ ಮತ್ತು ಸಂಕೀರ್ಣ ವರ್ಗೀಕರಣ ನಿಮಿತ್ಯ ಮಾತ್ರವಾಗಿ ಉಳಿದಿದೆ. ರಾಗ ರಾಗಿಣಿ ವರ್ಗೀಕರಣದ ವಿಷಯದಲ್ಲಿ ಕೆಲವು ಹಳೆಯ ಪರಂಪರೆಯ ಕಲಾವಿದರು ಪಂಡಿತರುಗಳು ಆಧಾರವಿದ್ದರೂ ಈ ವರ್ಗೀಕರಣವು ಪ್ರಚಾರದಲ್ಲಿ ಕಡಿಮೆಯಾಗ ಹತ್ತಿತ್ತು.

ನಾರದನು ತನ್ನ ನಾರದೀಯ ಶಿಕ್ಷಾದಲ್ಲಿ ಸ್ತ್ರೀ ರಾಗ, ಪುರುಷ ರಾಗ, ನಪುಂಸಕ ರಾಗ ಎಂದೂ,

***Please cite this article as:*** ಶರಣಬಸಪ್ಪ ಮೇಡೆದಾರ. (2023). ಜನಕ ರಾಗವಾದ ಭೈರವ ಥಾಟಿನ ಕೆಲವು ಜನ್ಯ ರಾಗಗಳು. *ಸೃಜನಿ: ಇಂಡಿಯನ್ ಜರ್ನಲ್ ಆಫ್ ಇನ್ನೋವೇಟಿವ್ ರೀಸರ್ಚ್ ಅಂಡ್ ಡೆವೆಲಪ್‌ಮೆಂಟ್.* 2(2), 145–149.

ರಮಾಮಾತ್ಯನು ಸ್ವರಮೇಳ ಕಲಾನಿಧಿಯಲ್ಲಿ ಉತ್ತಮ, ಮಧ್ಯಮ, ಅಧಮ ರಾಗಗಳೆಂದೂ, ಮತಂಗನ ಬೃಹದ್ದೇಶಿಯಲ್ಲಿ ಶುದ್ಧ ಛಾಯಾಂಗ, ಸಂಕೀರ್ಣ ರಾಗಗಳೆಂದೂ, ಮಧ್ಯಕಾಲದಲ್ಲಿ ರಾಗ ರಾಗಿಣಿ ಪದ್ಧತಿಯೆಂದೂ 14ನೇ ಶತಮಾನದಲ್ಲಿ ಶ್ರೀ ವಿದ್ಯಾರಣ್ಯರು ಪ್ರಥಮವಾಗಿ ಮೇಳ ರಾಗ ವರ್ಗೀಕರಣ ಪದ್ಧತಿಯನ್ನೂ ನಂತರ ಮೇಳಗಳ ಸಂಖ್ಯೆ ವ್ಯತ್ಯಾಸ ಹೊಂದುತ್ತಾ ಪಂ. ವೆಂಕಟಮುಖಿಯವರ 72 ಮೇಳಗಳಾದವು. ಅದೇ ಸಂದರ್ಭದಲ್ಲಿ ಪಂ.ವಿಷ್ಣುನಾರಾಯಣ ಭಾತಖಂಡೆ ಯವರು 10 ಥಾಟ್‌ಗಳನ್ನು ಹೇಳಿ ಹಿಂದೂಸ್ತಾನಿ ಸಂಗೀತದಲ್ಲಿ ಬರುವ ಎಲ್ಲ ರಾಗಗಳನ್ನು ವರ್ಗೀಕರಿಸಿದರು. ಹಾಗೆಯೇ ನಾರಾಯಣ ಮೋರೇಶ್ವರ ಖರೆಯವರು 30 ರಾಗಾಂಗಗಳ ಮೂಲಕ ರಾಗಗಳನ್ನು ವರ್ಗೀಕರಿಸಿದರು. ಹೀಗೆ ಪ್ರಾಚೀನ ಕಾಲದಿಂದ ಇಂದಿನವರೆಗೂ ರಾಗ ವರ್ಗೀಕರಣ ನಿರಂತರವಾಗಿ ಬದಲಾಗುತ್ತ ಸಾಗಿದೆ. ಹೇಗೆ ಕರ್ನಾಟಕ ಸಂಗೀತದಲ್ಲಿ ಎಲ್ಲ ರಾಗಗಳೂ 72 ಮೇಳಗಳಲ್ಲಿ ಅಡಕವಾಗಿದೆಯೋ ಹಾಗೆ ಹಿಂದೂಸ್ತಾನಿ ಸಂಗೀತದಲ್ಲಿ 10 ಥಾಟ್‌ಗಳಲ್ಲಿ ಅಡಕವಾಗಿವೆ. ಚತುರ ಪಂಡಿತ ಭಾತಖಂಡೆಯವರು 10 ಥಾಟ್‌ಗಳನ್ನು ಹೀಗೆ ಹೆಸರಿಸಿದ್ದಾರೆ.

1. ಬಿಲಾವಲ್‌ಥಾಟ್ – ಎಲ್ಲಾ ಶುದ್ಧ ಸ್ವರಗಳಿರುವ ರಾಗ
2. ಕಲ್ಯಾಣಥಾಟ್– ತೀವ್ರ ಮಧ್ಯಮ, ಬಾಕಿ ಎಲ್ಲಾ ಶುದ್ಧ ಸ್ವರ
3. ಖಮಾಜಥಾಟ್– ಒಂದು ವಿಕೃತ ಸ್ವರ(ನಿ), ಬಾಕಿ ಎಲ್ಲಾ ಶುದ್ಧ ಸ್ವರ
4. ಕಾಫಿಥಾಟ್– ಎರಡು ವಿಕೃತ ಸ್ವರ(ಗನಿ), ಬಾಕಿ ಎಲ್ಲಾ ಶುದ್ಧ ಸ್ವರ
5. ಭೈರವಥಾಟ್– ಎರಡು ವಿಕೃತ ಸ್ವರ(ರೆದ), ಬಾಕಿ ಎಲ್ಲಾ ಶುದ್ಧ ಸ್ವರ
6. ಪೂರ್ವಿಥಾಟ್– ಎರಡು ವಿಕೃತ ಸ್ವರ(ರೆದ) ಮತ್ತು ತೀವ್ರ ಮಧ್ಯಮ, ಬಾಕಿ ಎಲ್ಲಾ ಶುದ್ಧ ಸ್ವರ
7. ಮಾರವಾಥಾಟ್– ಒಂದು ವಿಕೃತ ಸ್ವರ(ರೆ) ಮತ್ತು ತೀವ್ರ ಮಧ್ಯಮ, ಬಾಕಿ ಎಲ್ಲಾ ಶುದ್ಧ ಸ್ವರ
8. ಆಸಾವರಿಥಾಟ್– ಮೂರು ವಿಕೃತ ಸ್ವರ(ಗದನಿ), ಬಾಕಿ ಎಲ್ಲಾ ಶುದ್ಧ ಸ್ವರ
9. ಭೈರವಿ ಥಾಟ್– ನಾಲ್ಕು ವಿಕೃತ ಸ್ವರ(ರೆಗದನಿ), ಬಾಕಿ ಎಲ್ಲಾ ಶುದ್ಧ ಸ್ವರ
10. ತೋಡಿಥಾಟ್– ಮೂರು ವಿಕೃತ ಸ್ವರ(ರೆಗದ) ಮತ್ತುತೀವ್ರ ಮಧ್ಯಮ, ಬಾಕಿ ಎಲ್ಲಾ ಶುದ್ಧ ಸ್ವರ

ಈ ಹತ್ತು ಥಾಟುಗಳಿಂದಲೇ ಸುಮಾರು 200ಕ್ಕೂ ಹೆಚ್ಚು ರಾಗಗಳ ಉತ್ಪತ್ತಿಯಾಗಿವೆ. ಸಂಗೀತ ವಿದ್ವಾಂಸರು 10 ಥಾಟಿನ ಬಗ್ಗೆ ಭಿನ್ನಾಭಿಪ್ರಾಯ ಪಟ್ಟಿದ್ದರೂ ಈ ಹತ್ತು ಥಾಟಗಳನ್ನೇ ಸರ್ವಾನುಮತ ದಿಂದ ಒಪ್ಪಿಕೊಂಡಿದ್ದಾರೆ. ವಿಮರ್ಶಾತ್ಮಕವಾದ ವಿವಾದಗಳಿದ್ದರೂ ಹತ್ತು ಥಾಟಗಳೇ ಈಗ ಬಳಕೆಯಲ್ಲಿವೆ. ಹಿಂದೂಸ್ತಾನಿ ಸಂಗೀತ ಪದ್ಧತಿಯ ಹತ್ತು ಥಾಟ ಪದ್ಧತಿಯ ಆಧುನಿಕ ರೀತಿಯನ್ನು ಪಂ. ವಿಷ್ಣುನಾರಾಯಣ ಭಾತಖಂಡೆಯವರು ಸಂಶೋಧನೆ ಮಾಡಿ ಇದರ ಪ್ರಚಾರ ಪಡಿಸಿದರು. ಅನೇಕ ಬಾರಿ ಸಂಗೀತ ಪರಿಷತ್ತುಗಳನ್ನು ನಡೆಸಿ ಪರಿಷತ್ತಿನಲ್ಲಿ 10 ಥಾಟಿನ ನಿರ್ಣಯ ತೆಗೆದುಕೊಂಡಿದ್ದರಿಂದ ಸರ್ವಾನುಮತದಿಂದ ಬೇರೆ ವಿದ್ವಾಂಸರು ಒಪ್ಪಿಕೊಂಡಿ ದ್ದಾರೆಂದು ಹೇಳಿದ್ದಾರೆ.

ಇವುಗಳಲ್ಲಿ ಭೈರವಥಾಟ್ ಅನೇಕ ವಿಶೇಷತೆಗಳನ್ನು ಹೊಂದಿದೆ. ಭೈರವ ಶಬ್ಧದ ಅರ್ಥವನ್ನು ಅಮರಸಿಂಹನು ತನ್ನ ಅಮರಕೋಶದಲ್ಲಿ ಈ ರೀತಿ ಹೇಳಿದ್ದಾನೆ. "ಭೈರವಂಧಾರುಣಂ ಭೀಷ್ಮಣಂ ಭೀಷ್ಮಂಘೋರಂ ಭೀಮಂ ಭಯಾನಕಂ ಭಯಂಕರಂ ಪ್ರತಿಭಯಂ" ಎಂಬುದಾಗಿ ಅಂದರೆ ಭಯಾನಕದ ಅರ್ಥದಲ್ಲಿ ಈ ಎಲ್ಲಾ ಶಬ್ಧಗಳನ್ನು ಹೇಳಲಾಗಿದೆ. ಇಲ್ಲಿ ಶಿವನ ತಾಂಡವವೂ ಭಯಾನಕ ರಸ ಪ್ರತಿಪಾದಿಸುವುದರಿಂದ ಭೈರವಕ್ಕೂ ಇದೇ ಅರ್ಥ ಹೇಳಿರುವುದರಿಂದ ಭೈರವಕ್ಕೂ ಶಿವನ ತಾಂಡವಕ್ಕೂ ನೇರವಾಗಿ ಸಂಬಂಧ ಕಲ್ಪಿತವಾಗುತ್ತದೆ. ಇದರಿಂದ ಭೈರವವು ಭಯಾನಕತೆಯ ಅರ್ಥ ಪ್ರತಿಪಾದ್ಯ

ಶಬ್ಧವೆನಿಸುತ್ತದೆ. ಸಂಗೀತದ ಉತ್ಪತ್ತಿ ವಿಷಯದಲ್ಲೂ ಭೈರವ ರಾಗದ ಉಲ್ಲೇಖ ಸಿಗುತ್ತದೆ. ಶಿವನ ಪಂಚಮುಖಗಳಿಂದ ಪಂಚರಾಗಗಳು ಜನನವಾದವು. ಪೂರ್ವಾಭಿಮುಖದಿಂದ ಭೈರವ, ಪಶ್ಚಿಮಾಭಿ ಮುಖದಿಂದ ಹಿಂಡೋಲ, ಉತ್ತರಾಭಿಮುಖವಾಗಿ ಮೇಘ, ದಕ್ಷಿಣಾಭಿಮುಖವಾಗಿ ದೀಪಕ ರಾಗ, ಆಕಾಶಮುಖವಾಗಿ ಶ್ರೀ ರಾಗಗಳು ಹುಟ್ಟಿಕೊಂಡವು. ಹೀಗೆ ಭೈರವವೂ ಶಿವನಿಂದ ಹುಟ್ಟಿತು. ಇದಲ್ಲದೇ ಭೈರವ ರಾಗವನ್ನು ಆದಿ ರಾಗ ಎಂದು ಹೇಳಲು ಸಾಕಷ್ಟು ಆಧಾರಗಳು ಸಿಗುತ್ತವೆ.

ದಾಮೋದರನ ಸಂಗೀತದರ್ಪಣದಲ್ಲಿ,

> ***"ಗಂಗಾಧರ: ಶಶಿಕಲಾತಿಲಕಸ್ತ್ರೀನೇತ್ರ ಸರ್ಪೈರ್ವಿಭೂಷಿತತನುರ್ಗಜಕೃತ್ತಿವಾಸಾ।***
>
> ***ಭಾಸ್ವತ್ರಿಶೂಲಕರ ಏಷ ನೃಮುಂಡಧಾರಿ ಶುಭ್ರಾಂಬರೋಜಯತಿ ಭೈರವ***
>
> ***ಆದಿರಾಗಂ॥"***

ರಾಗವಿಭೋದಲ್ಲಿ,

> ***"ಡಮರೂತ್ರಿಶೂಲಧಾರೀಪನ್ನಗ ಹಾರೀ ಸಿತೋಲ ಸದ್ ಬಸಿತಂ***
>
> ***ಧೃತಿ ಶಶಿ ಗಂಗೋತಿಜಟೋಜಿನವಿಕಟೋ ಭೈರವೇಸಮದೃಕ್॥"***

ತಾನಸೇನನೂ ಸಹ ತನ್ನ ರಚನೆಗಳಲ್ಲಿ ಇದನ್ನು ಉಲ್ಲೇಖಿಸಿದ್ದಾನೆ,

> ***"ಕಹೆ ಮಿಯಾತಾನಸೇನ ಸುನೋ ಶಾಹ ಅಕಬರ।***
>
> ***ಸಬ ರಾಗನ ಮೇ ಪ್ರಥಮರಾಗ ಭೈರವ॥"***

ಇನ್ನೊಂದು ರಚನೆಯಲ್ಲಿ,

> ***"ಕಹೆ ಮಿಯಾತಾನಸೇನ ಸುನೋ ಹೋ ಗುಣೀಜನ।***
>
> ***ಪ್ರಥಮರಾಗ ಭೈರವ ಹಿ ತನಮನದಯ ಸಾಧಿಯೆ॥"***

ಹೀಗೆ ಭೈರವವೇ ಆದಿರಾಗವೆಂದು ನಿರೂಪಿತ ವಾಗುತ್ತದೆ.

ಭೈರವ ಥಾಟ ರಿಷಭ, ದೈವತ ಸ್ವರವನ್ನು ಕೋಮಲವಾಗಿ ಹೊಂದಿರುತ್ತದೆ. ಭೈರವ ಥಾಟಿನಿಂದ ಹುಟ್ಟಿದ ರಾಗಗಳನ್ನು ಶಾಸ್ತ್ರೀಯ ಮತ್ತು ಸಾಮಾನ್ಯವಾಗಿ ಎರಡು ಪ್ರಕಾರಗಳಾಗಿ ವಿಂಗಡಿಸಬಹುದು. ಮತ್ತೆ ಶಾಸ್ತ್ರೀಯ ವಿಂಗಡಣೆಯಲ್ಲಿ 8 ಪ್ರಕಾರದ ರಾಗಗಳಾಗಿ ವರ್ಗೀಕರಿಸಬಹುದು. ಹೇಗೆಂದರೇ,

1. ರಿಷಭ ಮತ್ತು ದೈವತ ಕೋಮಲ ಮತ್ತು ಮಧ್ಯಮ ಶುದ್ಧದ ಪ್ರಕಾರ
2. ರಿಷಭ ಮತ್ತು ದೈವತ ಕೋಮಲ ಪ್ರಕಾರ
3. ರಿಷಭ ಕೋಮಲ ದೈವತ ಶುದ್ಧದ ಪ್ರಕಾರ
4. ಶುದ್ಧ ನಿಷಾದ, ಕೋಮಲ ನಿಷಾದ ಮತ್ತು ರಿಷಭ, ದೈವತ, ಗಾಂಧಾರ ಯಾವುದಾದರೂ ಒಂದು ಸ್ವರ ಶುದ್ಧ ಅಥವಾ ಕೋಮಲ ಪ್ರಕಾರ
5. ರಿಷಭ ಮತ್ತು ನಿಷಾದ ಕೋಮಲವಾಗಿರುವ ಪ್ರಕಾರ
6. ಎರಡು ಮಧ್ಯಮ ಅಂದರೆ ಶುದ್ಧ ಮತ್ತು ತೀವ್ರ ಮಧ್ಯಮ ಹೊಂದಿರುವ ಪ್ರಕಾರ
7. ಎರಡು ದೈವತ ಅಂದರೆ ಶುದ್ಧ ಮತ್ತು ಕೋಮಲ ದೈವತ ಹೊಂದಿರುವ ಪ್ರಕಾರ
8. ಎರಡು ರಿಷಭ ಅಂದರೆ ಶುದ್ಧ ಮತ್ತು ಕೋಮಲ ರಿಷಭ ಹೊಂದಿರುವ ಪ್ರಕಾರ ಎಂಬುದಾಗಿ ವಿಂಗಡಿಸಿದ್ದಾರೆ.

**ರಿಷಭ, ದೈವತ ಕೋಮಲ ಮತ್ತು ಮಧ್ಯಮ ಶುದ್ಧದ ಪ್ರಕಾರ**

ಉದಾ: ಭೈರವ, ಕಾಲಿಂಗಡಾ, ಗೌರಿ, ಕಮಲ ಮನೋಹರಿ, ಬಿಭಾಸ ಇತ್ಯಾದಿ. ಇಲ್ಲಿ ಭೈರವ ರಾಗವನ್ನು ವಿಶ್ಲೇಶಿಸುವುದಾದರೆ ಇದೊಂದು ಭೈರವ ಥಾಟಿನಿಂದ ಹುಟ್ಟಿದ ಬೆಳಗಿನ ಸಂಧಿ ಪ್ರಕಾಶ ರಾಗವಾಗಿದೆ. ರಿಷಭ, ದೈವತ ಕೋಮಲವಾಗಿದ್ದು ಸಂಪೂರ್ಣ ಜಾತಿಯ ರಾಗವಾಗಿದೆ. ರಿಷಭ, ದೈವತ ಗಳು ಆಂದೋಲನದಿಂದ ಕೂಡಿರುತ್ತದೆ. ಉತ್ತರಾಂಗ ಪ್ರಧಾನವಾಗಿದ್ದು ಗಂಭೀರ ಪ್ರಕೃತಿಯ ರಾಗವಾಗಿದೆ. ಕೇವಲ ವಾದಿ-ಸಂವಾದಿ, ನ್ಯಾಸ ಸ್ವರಗಳಿಂದ ಮಾತ್ರ ಕಾಲಿಂಗಡಾ ರಾಗದಿಂದ ಬಚಾಯಿಸಬಹುದು. ಇದೊಂದು ಶುದ್ಧರಾಗವಾಗಿದೆ. ಯಾವುದೇ

ರಾಗದಿಂದ ಮಿಶ್ರಣಗೊಂಡಿಲ್ಲ. ಆರಂಭದ ವಿದ್ಯಾರ್ಥಿಗಳಿಗೆ ಸುಲಭದ ರಾಗವಾದರೂ ಸಂಗೀತದಲ್ಲಿ ಅರಿವು ಹೆಚ್ಚಿದಂತೆ ಇದೊಂದು ಕಠಿಣ ರಾಗವೆನಿಸುತ್ತದೆ.

**ರಿಷಭ ಶುದ್ಧ, ದೈವತ ಕೋಮಲ ಪ್ರಕಾರ: ಉದಾ: ನಟ ಭೈರವ**

ಪ್ರಾಚೀನ ಕಾಲದಲ್ಲಿ ಹಿಜಾಜ್ ಭೈರವವೆಂದು ಕರೆಸಿಕೊಂಡಿರುವ ಇಂದಿನ ಪ್ರಸಿದ್ಧ ರಾಗವೇ ನಟ ಭೈರವ. ಹಿಂದೆ ಹಿಜಾಜ್ ಭೈರವ ತುಂಬಾ ಪ್ರಸಿದ್ಧ ಹೊಂದಿರದೇ ಇದ್ದರೂ ಪ್ರಸ್ತುತ ನಟ ಭೈರವ ತುಂಬಾ ಪ್ರಸಿದ್ಧವಾಗಿದೆ. ಇದು ರಿಷಭ ಶುದ್ಧ ದೈವತ ಕೋಮಲ ಹೊಂದಿರುವ ಸಂಪೂರ್ಣ ಜಾತಿಯ ರಾಗ. ವಾದಿ ಮಧ್ಯಮ ಸಂವಾದಿ ಷಡ್ಜ. ಪೂರ್ವಾಂಗದಲ್ಲಿ ನಟ ಉತ್ತರಾಂಗದಲ್ಲಿ ಭೈರವ ಈ ಎರಡೂ ರಾಗಗಳ ಮಿಶ್ರಣವೇ ಈ ರಾಗವಾಗಿದೆ.

**ರಿಷಭ ಕೋಮಲ, ದೈವತ ಶುದ್ಧದ ಪ್ರಕಾರ: ಉದಾ: ಆನಂದ ಭೈರವ ಇತ್ಯಾದಿ**

ಭೈರವಕ್ಕೆ ಬಿಲಾವಲ್ ಸೇರಿದರೆ ಈ ರಾಗವಾಗುತ್ತದೆ. ವಕ್ರ ಚಲನೆಯನ್ನು ಹೊಂದಿದೆ. ವಾದಿ ಮ ಸಂವಾದಿ ಸ. ಮಧ್ಯಮ ನ್ಯಾಸ ಸ್ವರವಾಗಿದ್ದು ಎರಡೂ ರಾಗಗಳನ್ನು ಸೇರಿಸುವ ರಾಗವಾಗಿದೆ. ಇದು ಎರಡು ರಾಗಗಳ ಮಿಶ್ರಣವಾಗಿರುವುದರಿಂದ ಇದನ್ನು ಯಾವ ಥಾಟ್‌ಗೆ ಸೇರಿಸುವುದು ಎಂಬ ಸಮಸ್ಯೆ ಇದ್ದೇ ಇದೆ.

**ಶುದ್ಧ ನಿಷಾದ, ಕೋಮಲ ನಿಷಾದ ಮತ್ತು ರಿಷಭ, ದೈವತ, ಗಾಂಧಾರ ಯಾವುದಾದರೂ ಒಂದು ಸ್ವರ ಶುದ್ಧ ಅಥವಾ ಕೋಮಲ ಪ್ರಕಾರ**

ಯಾವುದಾದರೂ ಒಂದು ಸ್ವರ ಶುದ್ಧ ಅಥವಾ ಕೋಮಲ ಪ್ರಕಾರ: ಉದಾ: ಕಾಜಿಹರಿ, ಜಂಗಲ, ಆನಂದ ಭೈರವಿ, ಶಿವಮತ್ ಭೈರವ ಇತ್ಯಾದಿ. ಶಿವಮತ್ ಭೈರವ ರಾಗದಲ್ಲಿ ಸ್ವಲ್ಪ ತೋಡಿ, ಸ್ವಲ್ಪ ಕಾನಡಾಛಾಯೆ ಕಾಣಸಿಗುತ್ತದೆ. ವಾದಿ ಧ ಸಂವಾದಿ ರೆ ಉತ್ತರಾಂಗ ಪ್ರಧಾನ ರಾಗ. ಇದನ್ನೂ ಭೈರವ ಥಾಟ್ ರಾಗವೆಂದು ಸಮಾಧಾನಕ್ಕೆ ಒಪ್ಪಬೇಕಷ್ಟೆ.

**ರಿಷಭ ಮತ್ತು ನಿಷಾದ ಕೋಮಲವಾಗಿರುವ ಪ್ರಕಾರ**

ಉದಾ: ಅಹಿರ್ ಭೈರವ, ಭೈರಾಗಿ ಭೈರವ, ಬಸಂತ ಮುಖಾರಿ ಇತ್ಯಾದಿ. ಭೈರವ ಮತ್ತು ಕಾಫಿ ರಾಗಗಳ ಮಿಶ್ರಣವೇ ಅಹಿರ್ ಭೈರವ ರಾಗವಾಗಿದೆ. ಸಂಪೂರ್ಣ ಜಾತಿಯಾಗಿದ್ದು ವಾದಿ ಮಧ್ಯಮ ಸಂವಾದಿ ಷಡ್ಜ ಅವರೋಹಾತ್ಮಕ ರಿಷಭ, ಮಧ್ಯಮ, ಪಂಚಮ ನ್ಯಾಸ.

**ಎರಡು ಮಧ್ಯಮ ಅಂದರೆ ಶುದ್ಧ ಮತ್ತು ತೀವ್ರ ಮಧ್ಯಮ ಹೊಂದಿರುವ ಪ್ರಕಾರ**

ಉದಾ: ರಾಮಕಲಿ, ಅಹಿರ ಲಲತ್, ಪ್ರಭತ ಭೈರವ, ಲಲಿತ ಪಂಚಮ, ಬಸಂತ ಭೈರವ ಇತ್ಯಾದಿ. ರಾಮಕಲಿ ರಾಗವು ಪ್ರಸಿದ್ಧ ರಾಗವಾಗಿದ್ದು ಎರಡು ಮಧ್ಯಮ ಹೊಂದಿದೆ. ತೀವ್ರ ಮಧ್ಯಮ, ಕೋಮಲ ನಿಷಾದ, ಮ ಪ ದನಿದ ಪ ಸ್ವರ ಸಮೂಹ ಭೈರವ ರಾಗಕ್ಕೆ ಸೇರಿದಾಗ ಈ ರಾಗವು ಸ್ಪಷ್ಟವಾಗುವುದು.

**ಎರಡೂ ದೈವತ ಅಂದರೆ ಶುದ್ಧ ಮತ್ತು ಕೋಮಲ ಮಧ್ಯಮ ಹೊಂದಿರುವ ಪ್ರಕಾರ**

ಉದಾ: ಆಭಿರಿ, ಸೌರಾಷ್ಟ್ರಟಂಕ ಇತ್ಯಾದಿ. ಈ ಪ್ರಕಾರದಲ್ಲಿ ರಾಗಗಳ ಸಂಖ್ಯೆ ಕಡಿಮೆ.

**ಎರಡು ರಿಷಭ ಅಂದರೆ ಶುದ್ಧ ಮತ್ತು ಕೋಮಲ ರಿಷಭ ಹೊಂದಿರುವ ಪ್ರಕಾರ**

ಉದಾ: ಭೈರವ, ಬಹಾರ ಇತ್ಯಾದಿ ರಾಗಗಳು. ಭೈರವ ಥಾಟ್‌ನ ಮುಖ್ಯ ರಾಗಗಳನ್ನು ಹೀಗೆ ವರ್ಗೀಕರಿಸುವುದರಿಂದ ಕೆಲವು ವಿಷೇಶ ವಿಷಯಗಳು ಬೆಳಕಿಗೆ ಬರುತ್ತವೆ. ಪ್ರಾತ: ಕಾಲದ ರಾಗಗಳಲ್ಲಿ ಷಡ್ಜ, ಮಧ್ಯಮ, ಪಂಚಮ, ದೈವತ ಸ್ವರಗಳು ಪ್ರಾಬಲ್ಯ ಹೊಂದಿದ್ದು ಈ ಸ್ವರಗಳಲ್ಲಿಯೇ ಯಾವುದಾದರೊಂದು ಸ್ವರ ವಾದಿಯಾಗಿರುತ್ತದೆ. ಷಡ್ಜ, ಪಂಚಮ ಸ್ವರಗಳು ಬಹುತೇಕ ವಿಶ್ರಾಂತಿ ಪಡೆಯುವ ಸ್ವರಗಳಾಗಿವೆ. ಹೆಚ್ಚಿನ ರಾಗಗಳಲ್ಲಿ ಮಧ್ಯಮವೇ ವಾದಿಯಾಗಿದ್ದು ನ್ಯಾಸ ಬಹುತ್ವ ಹೊಂದಿದೆ.

ಸಾಮಾನ್ಯವಾಗಿ ವಿಂಗಡಿಸುವುದಾದರೆ ಭೈರವ ಥಾಟ್‌ನ ಪ್ರಸಿದ್ಧ ರಾಗಗಳು, ಭೈರವ ಥಾಟ್‌ನ

ಅಪ್ರಸಿದ್ಧ ರಾಗಗಳು ಹಾಗೂ ಭೈರವ ಥಾಟ್‌ನ ಸಮಸ್ಯಾತ್ಮಕ ರಾಗಗಳು ಎಂಬುದಾಗಿ ವಿಂಗಡಿಸ ಬಹುದಾಗಿದೆ.

ಒಟ್ಟಾರೆಯಾಗಿ ಭೈರವ ರಾಗವು ಅತ್ಯಂತ ವಿಸ್ತಾರವಾಗಿದೆ ಮತ್ತು ಹೆಚ್ಚಿನ ಸಂಖ್ಯೆಯ ಟಿಪ್ಪಣಿ ಸಂಯೋಜನೆಗಳನ್ನು ಮತ್ತು ಶೌರ್ಯದಿಂದ ಶಾಂತಿಯವರೆಗೆ ಭಾವನಾತ್ಮಕ ಗುಣಗಳ ದೊಡ್ಡ ಶ್ರೇಣಿಯನ್ನು ಒಳಗೊಂಡಿರುತ್ತದೆ. ಅಹಿರ ಭೈರವ, ಆಲಂ ಭೈರವ, ಆನಂದ ಭೈರವ, ಬೈರಾಗಿ ಭೈರರ, ಬೀಹದ್ ಭೈರವ, ಭಾವಮತ ಭೈರವ, ದೇವತಾ ಭೈರವ, ಗೌರಿ ಭೈರವ, ನಾಟ್ಯ ಭೈರವ, ಶಿವಮತ ಭೈರವ ಸೇರಿದಂತೆ (ಆದರೆ ಸೀಮಿತವಾಗಿಲ್ಲ) ಅದರ ಆಧಾರದ ಮೇಲೆ ಹಲವು ಮಾರ್ಪಾಡುಗಳಿವೆ.

**ಪರಾಮರ್ಶನ/ಆಕರ ಗ್ರಂಥಗಳು**


- ಜಯಸುಖಲಾಲ ತ್ರಿ ಶಾಹ ವಿನಯ. (1991). *ಭೈರವ ಕೇ ಪ್ರಕಾರ್.* ಸಂಗೀತ್ ಕಾರ್ಯಾಲಯ.
- ಲೂಯಿ ರೈಸ್. (1989). *ಅಮರ ಕೋಶ ಅಮರಸಿಂಹ.* ಪ್ರಸಾರಾಂಗ, ಮೈಸೂರು ವಿಶ್ವವಿದ್ಯಾನಿಲಯ.
- ಮಹಾರಾಣಿ ಶರ್ಮಾ & ಜಯಶರ್ಮಾ. (2014). *ಸಂಗೀತ ಮಣಿ.* ಶ್ರೀ ಭೂವನೇಶ್ವರಿ ಪ್ರಕಾಶನ.
- ಪಂ. ರಾಮಾಶ್ರಯ ಝಾ. (2006). *ಅಭಿನವ ಗೀತಾಂಜಲಿ.* ಸಂಗೀತ ಸಾಧನಾ ಪ್ರಕಾಶನ.
- ವಸಂತ. (2013). *ಸಂಗೀತ್ ವಿಶಾರದ್.* ಸಂಗೀತ್ ಕಾರ್ಯಾಲಯ.